ದಿನಾಂಕಃ **13.11.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ವಾಟೀ ಸವಾಲಃ ಶ್ರೀ ಎಸ್ ಎಸ್ ಎಮ್ – ಎದುರುದಾರ ಪರ ವಕೀಲರಿಂದಃ**

ಆ ದಿನ ಟ್ರಾಕ್ಟರ್ ನಲ್ಲಿ ಯಾರು ಯಾರು ಹೋಗುತ್ತಿದ್ದರು ಹೆಸರು ಹೇಳಿ ಎಂದರೆ ಸಾಕ್ಷಿ ಶೋಭಾ, ಅಡಿವೆಪ್ಪ ಇಷ್ಟೇ ಗೊತ್ತು, ಅವರ ಇನ್ನಿತರೇ ವಿವರಗಳು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಜನರು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಟ್ರಾಕ್ಟರ್ ಯಾವ ಊರಿನಿಂದ ಯಾವ ಊರಿಗೆ ಹೋರಟಿತ್ತು ಎಂದರೆ ಸಾಕ್ಷಿ ಮುದೆನೂರಿನಿಂದ ಹೋರಟಿತ್ತು ಎಲ್ಲಿಗೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**2.** ನಿಮ್ಮ ಮುಖ್ಯ ವಿಚಾರಣೆಯ ಏನು ಬರೆದಿದೆ ಎಂದು ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿ ಗೊತ್ತು ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಟ್ರಾಕ್ಟರ್ ಮತ್ತು ಟ್ರೇಲರ್ ಸಂಖ್ಯೆ ಬರೆಸಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಇಲ್ಲ ಎಂದು ನುಡಿಯುತ್ತಾರೆ. ಟ್ರಾಕ್ಟರ್ ಎಲ್ಲಿಂದ ಎಲ್ಲಿಗೆ ಹೋರಟಿತ್ತು ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿರುತ್ತೇನೆ ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**3.** ಅಪಘಾತವಾದ ನಂತರ ನೀವು ಎಲ್ಲಿಗೆ ಹೋದಿರಿ ಎಂದರೆ ಸಾಕ್ಷಿ ನಾನು ಎಲ್ಲಿಗೂ ಹೋಗಿಲ್ಲ ಆದರೆ ನನ್ನ ಮನೆಯವರು ಹೋದರು ಎಂದು ನುಡಿಯುತ್ತಾರೆ. ನೇರವಾಗಿ ನೀವು ಅಂತ್ಯ ಸಂಸ್ಕಾರಕ್ಕೆ ಹೋಗಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಂತ್ಯ ಸಂಸ್ಕಾರಕ್ಕೆ ನೀವು ಹೇಳಿದಷ್ಟು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಕುರಿತು ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**4.** ಮೃತರಿಗೆ ತಿಂಗಳಿಗೆ ರೂ.**15,000/-** ಆದಾಯ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಏಕೆಂದರೆ ಅವರು ಕೂಲಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಮೃತರು ಕೂಲಿ ಮಾಡುತ್ತಿರಲಿಲ್ಲ ಆದರೂ ಸಹ ಹೆಚ್ಚಿನ ಪರಿಹಾರ ಪಡೆಯಬೇಕು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದಲೇ ಎದುರುದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೀರಿ ಎಂದರೆ

ಸಾಕ್ಷಿ ಪರಿಹಾರಕ್ಕಾಗಿ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಪರಿಹಾರ ಪಡೆಯುವ ಉದ್ದೇಶದಿಂದಲೇ ಚಾಲಕನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿ.

**5.** **05-06** ಅಡಿ ಮೇವು ಟ್ರೇಲರ್ ಪೂರ್ತಿ ಇರುತ್ತದೆ ಎಂದರೆ ಸರಿಯಲ್ಲ. ಮೃತರು, ಅಡಿವೆಪ್ಪ ಮತ್ತು ಶೋಭಾರವರು ತಮ್ಮ ಮೇವುಗಳ ಮೇಲೆ ಕುಳಿತುಕೊಂಡು ಹರಟೆ ಹೊಡೆಯುತ್ತಿದ್ದರು ಮತ್ತು ಅವರ ನಿರ್ಲಕ್ಷ್ಯತನದಿಂದಲೇ ಬಿದ್ದು ಗಾಯ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮೇವನ್ನು ಸರಿಯಾಗಿ ಹಿಡಿದುಕೊಂಡು ಕುಳಿತಿದ್ದಲ್ಲಿ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಎಂದಿನಂತೆ ವಾಹನವನ್ನು ನಿಧಾನವಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಚಾಲಕನದ್ದು ಮತ್ತು ವಾಹನದ ಮಾಲೀಕರದ್ದು ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಬೇಕು ಎಂದು ಚಾಲಕ ಮತ್ತು ಮಾಲೀಕರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಮತ್ತು ಅರ್ಜಿಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**6.** ಅಪಘಾತವಾದ ನಂತರ ನೀವು ಮರು ಮದುವೆಯಾಗಿದ್ದು ನಿಮ್ಮ ಅಧಾರ ಕಾರ್ಡ, ಪಾನ್ ಕಾರ್ಡ, ಮತ್ತಿತರ ದಾಖಲೆಗಳಲ್ಲಿ ಆ ವಿವರಗಳಿರುವ ಕಾರಣ ನೀವು ಆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಆ ಮಾಹಿತಿಯನ್ನು ನ್ಯಾಯಾಲಯಕ್ಕೆ ಒದಗಿಸಲು ತೊಂದರೆ ಇಲ್ಲ ಎಂದರೆ ಸರಿ. **01** ಮತ್ತು **02** ನೇ ಅರ್ಜಿದಾರರು ಕೂಲಿ ಕೆಲಸ ಮಾಡಿ ದುಡಿಯುತ್ತಾರೆ ಎಂದರೆ ಸಾಕ್ಷಿ ಕೂಲಿ ಕೆಲಸ ಮಾಡುತ್ತಾರೆ ಅದರೆ ಆದಾಯ ಸಾಕಷ್ಟು ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು, **01** ಮತ್ತು **02** ನೇ ಅರ್ಜಿದಾರರು ಮೃತರ ಜೀವಿತಾವಧಿಯಲ್ಲಿ ನಿಮ್ಮ ಕೆಲಸದಿಂದಲೇ ಜೀವನ ನಡೆಸುತ್ತಿದ್ದೀರಿ ಎಂದರೆ ಸಾಕ್ಷಿ ಮೃತರ ಅದಾಯದ ಮೇಲೆ ಅವಲಂಬಿತರಾಗಿದ್ದೇವು ಎಂದು ನುಡಿಯುತ್ತಾರೆ. ಈ ವಿಚಾರವಾಗಿ ಸುಳ್ಳು ನುಡಿದಿದ್ದೀರಿ ಎಂದರೆ ಸರಿಯಲ್ಲ. ಮೃತರು ತಮ್ಮ ಆದಾಯವನ್ನು ನಿಮಗೆ ಮತ್ತು **01, 02** ನೇ ಅರ್ಜಿದಾರರಿಗೆ ಕೊಡುತ್ತಿರಲಿಲ್ಲ ಎಂದರೆ ಸರಿ. ಪರಿಹಾರ ಪಡೆಯುವ ಉದ್ದೇಶದಿಂದ ಸಳ್ಳು ಅರ್ಜಿಯನ್ನು ಹಾಕಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ದಾಖಲೆಗಳನ್ನು ಸೃಷ್ಠಿ ಮಾಡಿ ಹಾಜರು ಮಾಡಿದ್ದೀರಿ ಎಂದರೆ ಸರಿಯಲ್ಲ. ಪೋಲಿಸರು ಮತ್ತು ನೀವು, ನಿಮ್ಮ ಅತ್ತೆ ಮಾವ ಎಲ್ಲರೂ ಶಾಮಿಲಾಗಿ ಪೋಲಿಸ

ದೂರನ್ನು ವಾಹನದ ಚಾಲಕ ಮತ್ತು ಮಾಲೀಕರ ಮೇಲೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಎಲ್ಲರೂ ಸೇರಿ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ.

**<u>ಮರುವಿಚಾರಣೆಃ</u> ಇಲ್ಲ.**

(ತೆ ನ್ಯಾ ದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಅದೆ

ಹಿರಿಯ ದಿವಾಣಿ ನ್ಯಾಯಾಧೀಶರು,
ರಾಮದುರ್ಗ.